
## ಕಥೋಪದೇಶ

# ತನ್ನಂತೆ ಪರರು

ಒಂದು ಗ್ರಾಮಪ್ರದೇಶದ ರಸ್ತೆಯ ಪಕ್ಕ ಇಬ್ಬರು ವ್ಯಕ್ತಿಗಳು ಜಗಳವಾಡುತ್ತಿದ್ದರು.

ಮೊದಲು ಮಾತಿನಿಂದ ಶುರುವಾದ ಜಗಳ ಅನಂತರ ಹೊಡೆತಬಡಿತಕ್ಕಿಳಿಯಿತು. ಅವರಲ್ಲಿ ಬಲಶಾಲಿಯಾದವನು ಇನ್ನೊಬ್ಬನನ್ನು ಕೆಳಗುರುಳಿಸಿ ಅವನ ತಲೆಯ ಮೇಲೆ ಒಂದು ಕಲ್ಲನ್ನು ಹಾಕಿದನು. ಇದನ್ನು ದೂರದಿಂದ ನೋಡಿದ ದಾರಿಹೋಕನೊಬ್ಬನು ಕೂಗುತ್ತ ಜಗಳವನ್ನು ತಪ್ಪಿಸಲು ಓಡಿ ಬಂದನು. ಬಲಶಾಲಿಯಾದ ವ್ಯಕ್ತಿ ಭಯದಿಂದ ಅಲ್ಲಿಂದ ಓಡಿದ.




ದಾರಿಹೋಕನು ಕೆಳಗೆ ಬಿದ್ದ ವ್ಯಕ್ತಿಯನ್ನು ಉಪಚರಿಸತೊಡಗಿದ. ಆದರೆ ಅವನ ತಲೆಗೆ ಬಲವಾಗಿ ಪೆಟ್ಟು ಬಿದ್ದಿತ್ತು. ಅವನು ರಕ್ತಕಾರುತ್ತ ಸತ್ತು ಹೋದನು. ಈಗ ಕೊಲೆಯ ಆಪಾದನೆ ತನ್ನ ಮೇಲೆ ಬರುವದೆಂಬ ಭೀತಿಯಿಂದ ಅವನು ಅಲ್ಲಿಂದ ಹೊರಟು ಹೋಗಲು ಅಣಿಯಾದ. ಅಷ್ಟರಲ್ಲಿ ರಾಜಭಟರು ಅಲ್ಲಿಗೆ ಆಗಮಿಸಿದರು. ಅವರು ಸತ್ತು ಬಿದ್ದಿದ್ದ ವ್ಯಕ್ತಿಯನ್ನು ನೋಡಿ ಇವನೇ ಅವನ ಕೊಲೆಗಾರನೆಂದು ನಿರ್ಣಯಿಸಿ ದಾರಿಹೋಕನನ್ನು ಹಿಡಿದುಕೊಂಡು ಹೋದರು.

ರಾಜನು ಅವನನ್ನು ವಿಚಾರಣೆಗೆ ಒಳಪಡಿಸಿ ಗಲ್ಲು ಶಿಕ್ಷೆಯನ್ನು ವಿಧಿಸಿದನು. ಅವನನ್ನು ಗಲ್ಲು ಕಂಬದ ಹತ್ತಿರ ಕರೆದುಕೊಂಡು ಹೋದರು. ಅವನನ್ನು ಇನ್ನೇನು ಗಲ್ಲಿಗೆ ಏರಿಸಬೇಕು ಎಂದಿರುವಾಗ ಒಬ್ಬ ವ್ಯಕ್ತಿ ಓಡುತ್ತ ಬಂದು 'ನಿಲ್ಲಿಸಿ'ಎಂದನು. ಎಲ್ಲರೂ ಆಶ್ಚರ್ಯದಿಂದ ಅವನ ಕಡೆ ತಿರುಗಿದರು. ಆತ ಈಗ ತನ್ನ ವಿಚಾರವನ್ನು ಹೇಳತೊಡಗಿದ:

'ಆ ವ್ಯಕ್ತಿಯನ್ನು ಕೊಲೆಗೈದವನು ನಾನು, ಇವನಲ್ಲ. ನಾನು ಮತ್ತು ಕೊಲೆಯಾದ ವ್ಯಕ್ತಿ ಜಗಳ ಆಡುತ್ತಿದ್ದೆವು. ನಾನು ಅವನನ್ನು ನೆಲಕ್ಕುರುಳಿಸಿ ತಲೆಯ ಮೇಲೆ ಕಲ್ಲು ಹಾಕಿದೆ. ಅಷ್ಟರಲ್ಲಿ ಇವನು ಬಂದನು. ನಾನು ಅಲ್ಲಿಂದ ಓಡಿ ಹೋಗಿ ಮರೆಯಲ್ಲಿ ನಿಂತು ನಡೆದುದನ್ನೆಲ್ಲ ನೋಡುತ್ತಿದ್ದೆ. ಇವನ ಮೇಲೆ ಕೊಲೆಯ ಆಪಾದನೆ ಬಂದು ಗಲ್ಲು ಶಿಕ್ಷೆ ಆದ ವಿಷಯ ತಿಳಿಯಿತು. ನಾನೇ ಸಿಕ್ಕಿ ಹಾಕಿ ಕೊಂಡು ನನಗೇ ಈ ಶಿಕ್ಷೆ ಒದಗಿದ್ದರೆ ನನ್ನ ಮನಃಸ್ಥಿತಿ ಹೇಗಿರುತ್ತಿತ್ತು, ಎಂಥ ಶೋಚನೀಯವಾದ ಸ್ಥಿತಿ ಅದು –ಎಂದು ಆಲೋಚಿಸ


ತೊಡಗಿದೆ. ನನ್ನ ಸಂಕಟವೇ ಇವನ ಸಂಕಟ, ನನಗಾಗದುದು ಇವನಿಗೂ ಆಗಬಾರದು ಎಂದೆನಿಸಿ ಇವನನ್ನು ಈ ದುಃಸ್ಥಿತಿಯಿಂದ ತಪ್ಪಿಸಲು ಓಡಿ ಬಂದೆ.'

ಅವನ ಪ್ರಾಮಾಣಿಕತೆಯಿಂದಾಗಿ ಇಬ್ಬರಿಗೂ ಬಿಡುಗಡೆ ಆಯಿತು.

ನ ತತ್ ಪರಸ್ಯ ಸಂದದ್ಯಾತ್
ಪ್ರತಿಕೂಲಂ ಯದಾತ್ಮನಃ |
ಏತದ್ಧರ್ಮಮಿತಿ ಪ್ರೋಕ್ತಂ
ಕಾಮಾದನ್ಯತ್ ಪ್ರವರ್ತತೇ ||

'ತನಗೆ ಪ್ರತಿಕೂಲವಾದುದನ್ನು ಇತರರಿಗೆ ಉಂಟಾಗುವಂತೆ ಮಾಡಬಾರದು; ಇದೇ ಧರ್ಮ. ಉಳಿದುದೆಲ್ಲವೂ ಆಸೆಯಿಂದ ಹುಟ್ಟುವಂತಹದು'– ಎಂಬ ನೀತಿ ಈ ಕಥೆಯಿಂದ ತಿಳಿದುಬರುತ್ತದೆ.

# ಮೃದುವಚನ



ಕಲೆ: ರಾಮಗೌತಮ

ಒಬ್ಬ ಭಿಕ್ಷುಕ ಒಂದು ಮನೆಗೆ ಭಿಕ್ಷೆ ಬೇಡಲು ಹೋದ. ಅವನು ತುಂಬ ಹಸಿದಿದ್ದ. ಬಳಲಿಕೆ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಮಾನಸಿಕವಾಗಿಯೂ ತುಂಬ ನೊಂದಿದ್ದ. ಮನೆಯ ಯಜಮಾನ ಹೊರಗೆ ಬಂದವನೆ ಭಿಕ್ಷುಕನನ್ನು ಚೆನ್ನಾಗಿ ಬೈದು ಓಡಿಸಿದನು. ಮೊದಲೇ ಬಳಲಿದ್ದ ಮತ್ತು ನೊಂದಿದ್ದ ಅವನಿಗೆ ತಡೆಯಲಾರದ ವೇದನೆ ಉಂಟಾಯಿತು.

ಅವನು ಸ್ವಲ್ಪ ಮುಂದೆ ಹೋಗಿ ನಡೆಯಲಾಗದೆ ಒಂದು ಮರದಡಿ ಮಲಗಿದನು. ಅವನನ್ನು ನಿದ್ರೆ ಆವರಿಸಿತು. ಅಷ್ಟರಲ್ಲಿಯೆ ಅವನನ್ನು ಯಾರೋ ಮೃದುವಾಗಿ ತಟ್ಟಿ ಕರೆದರು. ಅವನು ಕಣ್ತೆರದು ನೋಡಿದಾಗ ಒಂದು ಚಿಕ್ಕ ಹುಡುಗಿ ನಿಂತುಕೊಂಡಿದ್ದಳು. ಭಿಕ್ಷುಕ ಆಶ್ಚರ್ಯದಿಂದ ಆಕೆಯನ್ನು ನೋಡಿದ. ತಾನು ಈ ಹಿಂದೆ ಭಿಕ್ಷೆ ಬೇಡಿದ ಮನೆಯಲ್ಲಿ ಅವಳು ನಿಂತಿದ್ದನ್ನು ಆತ ಕಂಡಿದ್ದ. ಮನೆಯ ಯಜಮಾನ ಇವನನ್ನು ಬೈದು ಓಡಿಸಿದಾಗ ಆಕೆಗೆ ತುಂಬ ನೋವಾದುದನ್ನು ಇವನು ಗಮನಿಸಿದ್ದ.

ಆಕೆಯ ವಾತ್ಸಲ್ಯಪೂರ್ಣ ಧ್ವನಿ, ಮೃದುವಚನ ಭಿಕ್ಷುಕನ ನೋವನ್ನು ನಿವಾರಿಸಿತು. ಬಳಲಿಕೆ ಕಡಿಮೆಯಾಯಿತು. ಆಕೆ ತನ್ನ ಪುಟ್ಟ ಕೈಗಳಿಂದ ನೀಡಿದ ತಿಂಡಿಯನ್ನು ತಿಂದನು. ಅದು ಅವನ ದೇಹ ಮನಸ್ಸುಗಳೆರಡಕ್ಕೂ ಶಕ್ತಿಯನ್ನೂ ಪುಷ್ಟಿಯನ್ನೂ ನೀಡಿತು.

ಆ ಹುಡುಗಿಯೇ ಭಿಕ್ಷುಕನನ್ನು ಬೈದು ಓಡಿಸಿದ ಯಜಮಾನನ ಮಗಳು. ಭಿಕ್ಷುಕನ ಸ್ಥಿತಿಗೆ ಮರುಗಿ ತಂದೆಗೆ ತಿಳಿಯದಂತೆ ತಿಂಡಿಯನ್ನು ತಂದು ಭಿಕ್ಷುಕನಿಗೆ ಉಣಿಸಿದಳು. ಆ ತಿಂಡಿಗಿಂತ ಹೆಚ್ಚಾಗಿ ಅವಳ ಸ್ನೇಹಪೂರ್ಣ ಮೃದುನುಡಿ ಅವನಿಗೆ ಶಾಂತಿ ಸಮಾಧಾನವನ್ನು ನೀಡಿತು.

ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ|
ತಸ್ಮಾದೇವ ಪ್ರವಕ್ತವ್ಯಂ ವಚನೇ ಕಾ ದರಿದ್ರತಾ ||

'ಪ್ರಿಯವಾದ ಮಾತುಗಳಿಂದ ಎಲ್ಲ ಜಂತುಗಳು ಸಂತುಷ್ಟಗೊಳ್ಳುತ್ತವೆ. ಆದ್ದರಿಂದ ಪ್ರಿಯವಾಕ್ಯವನ್ನೆ ನುಡಿಯಬೇಕು. ಮಾತಿಗೂ ಬಡತನವೇ?'